ದಕ್ಕಿರದ ಲೋಕವೊಂದು ಅವಳೊಳಗೆ ಅವತರಿಸಿ ಹುಲ್ಲು ಹಾಸಿನ ತುಂಬೆಲ್ಲಾ ಓಡಿದಳು. ಟುವ್ ಟುವ್ ಟುವ್ವಿ ಎಂದು ಮರದ ಮೇಲಿನಿಂದ ಹಾಡಿದ ಹಕ್ಕಿಯ ಸದ್ದನ್ನೇ ಕೇಳಿ, ಎಲ್ಲಿದೆ ಆ ಹಕ್ಕಿ ಎಂದು ಹುಡುಕುತ್ತ ಬೆರಗಾದಳು. ಮರದ ದಟ್ಟತೆ, ಕಾಂಡದ ಆಕಾರ ನೋಡಿ, ಮುಟ್ಟುವುದಾ ಬೇಡವಾ ಎಂದು ತಡವರಿಸಿದಳು. ಕೊನೆಗೆ ಆ ಮರವನ್ನೇ ಅಪ್ಪಿಕೊಂಡು ಸಂಭ್ರಮಿಸಿದಳು. ಮಗಳ ಬೆರಗು, ಖುಷಿ, ನೋಡಿ ಶಾಲಿನಿಗೆ ಹೇಗೆ ಪ್ರತಿಕ್ರಿಯಿಸಬೇಕೋ ಗೊತ್ತಾಗಲಿಲ್ಲ. ಮಗಳ ನಡಿಗೆಯಲ್ಲಿ, ನಿಲುವಿನಲ್ಲಿ, ನಗುವಿನಲ್ಲಿ, ಯಾವತ್ತೂ ಕಂಡಿರದ ಸ್ವರ್ಗವೊಂದು ಕಂಡಂತಾಗಿ ಅದರಲ್ಲೇ ಶಾಲಿನಿ ಕರಗಿಹೋದಳು. ಮರೆತ ತನ್ನನ್ನೇ ಕಂಡುಕೊಂಡವಳಂತೆ, ತನ್ನ ಬಾಲ್ಯವನ್ನೇ ಮರಳಿ ಪಡೆದಂತೆ, ಕಣ್ಮರೆಯಾದ ತನ್ನೊಳಗಿನ ನಲಿವಿನ ನವಿಲೊಂದು ಗರಿಬಿಚ್ಚಿ ಕುಣಿದಂತನ್ನಿಸಿತು ಅವಳಿಗೆ. ಎಷ್ಟು ಬೇಕಾದ್ರೂ ಹಾರು, ಎಷ್ಟು ಬೇಕಾದ್ರೂ ಕುಣಿ ಎಂದು ಮಗಳನ್ನು ಅರಳುಗಣ್ಣುಗಳಿಂದ ನೋಡಿದಳು, ಹೊಸ ಮಗಳನ್ನೇ ಕಂಡಂತಾಗಿ ಮತ್ತೆ ಮತ್ತೆ ಕಣ್ತುಂಬಿಕೊಂಡಳು. ಹೊಸ ಅಮ್ಮನನ್ನೇ ಕಂಡಂತಾಗಿ ಸಾನ್ವಿಯ ಕಣ್ಣೂ ಬೆಳಗಿದವು. ಅಮ್ಮನ ಹೊಸ ನೋಟದಲ್ಲಿ ಬೆರೆತು ಜಗತ್ತೇ ಸಿಕ್ಕಂತಾಗಿ ಅವಳೂ ನಲಿವಿನ ನವಿಲಾದಳು. ಇಬ್ಬರೂ ಆ ಹಸಿರಿನ ನಡುವೆ ನಡೆಯುತ್ತ ಹೋದಂತೆಲ್ಲಾ ತಾವು ಇಷ್ಟುದಿನ ಕಳೆದುಕೊಂಡ ಹೊಸತೇನನ್ನೋ ಪಡೆದುಕೊಳ್ಳುತ್ತಿರುವವರಂತೆ ಸಾಗಿದರು. ಅಲ್ಲೇ ಇದ್ದ ಕಲ್ಲುಬೆಂಚಿನ ಮೇಲೆ ಒಂದು ಕ್ಷಣ ಕೂತರು. ಅಲ್ಲೇ ತುಸು ಹತ್ತಿರದಲ್ಲಿ ವಾಕಿಂಗ್‌ಗೆ ಬಂದಿದ್ದ ಅಜ್ಜನೊಬ್ಬ ಸಾನ್ವಿಯದ್ದೇ ವಯಸ್ಸಿನ ಮೊಮ್ಮಗನನ್ನು ಕಲ್ಲು ಬೆಂಚಿನ ಮೇಲೆ ಕೂರಿಸಿ ದೊಡ್ಡದಾಗಿ ಕತೆ ಹೇಳುತ್ತಿದ್ದ, ಕತೆ ಹೇಳುತ್ತ ಹೇಳುತ್ತ ತನ್ಮಯನಾದಾಗ ಅಜ್ಜನ ಧ್ವನಿ ಅಜ್ಜನಿಗೇ ಗೊತ್ತಾಗದೇ ತುಸು ದೊಡ್ಡದಾಗಿ ಆಚೀಚೆ ಹೋಗುವವರಿಗೂ ಕೇಳಿಸುತ್ತಿತ್ತು. ಶಾಲಿನಿ, ಸಾನ್ವಿ ಇಬ್ಬರೂ, ನೀವೂ ಕೇಳಿ ಎನ್ನುವಂತೆ ಆಹ್ವಾನಿಸುತ್ತಿದ್ದ ಅಜ್ಜನ ಕತೆಯನ್ನು ಕಿವಿ ಮೇಲೆ ಹಾಕಿ ಮೌನವಾಗಿ ಕೂತರು.

'ನೋಡು, ಆ ಮರ ಕಾಣಿಸುತ್ತಿದೆಯಲ್ಲಾ, ಅಂತದ್ದೇ ಸಾವಿರ ಸಾವಿರ ಮರಗಳಿತ್ತು ಇಲ್ಲಿ. ಅದರೊಳಗೆ ನೂರಾರು ಹಕ್ಕಿಗಳಿತ್ತು, ಮರಿಗಳಿತ್ತು. ಒಂದು ದಿನ ನೂರಾರು ನರ ರಾಕ್ಷಸರು ಬಂದು ನಿಮ್ಮನ್ನೆಲ್ಲಾ ಕಡಿಯುತ್ತೇವೆ, ಇಲ್ಲಿ ಯಾರೂ ಕಟ್ಟಿಸಲಾಗದಂತಹ ಪಟ್ಟಣ, ಕಟ್ಟಡ ಕಟ್ಟುತ್ತೇವೆ ಎಂದರು, ಕೊನೆಗೆ...' ಎಂದು ಅಜ್ಜ ಕತೆ ಹೇಳುತ್ತ ಇನ್ನೇನು ಮುಂದುವರಿಸಬೇಕು ಅನ್ನುವಷ್ಟರಲ್ಲಿ, ತುಸು ದೂರದ ಕಲ್ಲು ಬೆಂಚಿನ ಮೇಲೆ ಕೂತಿದ್ದವರು ತನ್ನ ಕತೆ ಕೇಳುತ್ತಿದ್ದಾರೆ, ತನ್ನ ಧ್ವನಿ ದೊಡ್ಡದಾಗಿರಬೇಕು ಎನ್ನುವ ಸಣ್ಣ ಮುಜುಗರದಿಂದ ಕತೆ ನಿಲ್ಲಿಸಿದರು. ಮತ್ತೆ ಕತೆ ಮುಂದುವರಿಸದೇ ಧ್ಯಾನಸ್ಥರಾಗಿ ಕೂತುಬಿಟ್ಟರು.

'ಅಮ್ಮ, ಆ ಅಜ್ಜನಿಗೆ ಕತೆ ಹೇಳೋಕೆ ಹೇಳು' ಎಂದು ಸಾನ್ವಿ ಶಾಲಿನಿಯ ಮೈಯನ್ನು ಸಣ್ಣಗೆ ಚಿವುಟಿದಳು. ಅವನು ಪರಿಚಯದ ಅಜ್ಜನಾಗಿದ್ದರೆ,



'ಅಜ್ಜ, ಕತೆ ಮುಂದುವರಿಸಿ' ಅಂತ ಖಂಡಿತ ಹೇಳುತ್ತಿದ್ದಳೇನೋ ಶಾಲಿನಿ, ಆದರೆ ಅವರು ಮೊಮ್ಮಗನಿಗೆ ಕತೆ ಹೇಳುವುದನ್ನು ಕದ್ದು ಮುಚ್ಚಿ ಕೇಳಿ, ಈಗ ಕತೆ ಮುಂದುವರೆಸಿ ಅಂತ ಹೇಳೋದು ಅವಳಿಗೆ ಸಭ್ಯತೆ ಅನ್ನಿಸದೇ ಮೌನವಾಗಿ ಕೂತಳು. ಆದರೂ ಅಜ್ಜ ಹೇಳದೇ ಬಾಕಿಯಿರಿಸಿದ ಕತೆಯ ಮುಂದುವರಿದ ಭಾಗ ತನಗೆ ಗೊತ್ತಿದೆ ಎನ್ನುವಂತೆ ದೊಡ್ಡ ನಿಟ್ಟುಸಿರಿಟ್ಟಳು. ಒಂದು ಕಾಲದಲ್ಲಿ ಕಾಡಾಗಿದ್ದ, ಈಗ ಪಾರ್ಕಾಗಿ ಉಳಿದ ಮರಗಳು, ನಿಮಗೋಸ್ಕರ ನಾವೆಷ್ಟು ಬಲಿಯಾದೆವು, ನಿಮ್ಮ ಸ್ವಾರ್ಥಕ್ಕೋಸ್ಕರ, ಆಸೆಗಳಿಗೋಸ್ಕರ ನಮ್ಮವರು ಪ್ರಾಣ ತೆರಬೇಕಾಯಿತು ಎಂದು ಅಣಕಿಸಿದಂತಾಯಿತು. ಕಾಡೆಲ್ಲ ಕರಗಿ ಆಕಾಶದಲ್ಲಿ ತೇಲುವಂತೆ ನಿಂತಿದ್ದ ಕೋಟಿ ಕೋಟಿ ಬೆಲೆಯ ಕಟ್ಟಡಗಳನ್ನು ಶೂನ್ಯಭಾವದಿಂದ ನೋಡಿದಳು. ಕೋಟಿ, ಲಕ್ಷ ಎಂದು ಬೆಲೆ ಕಟ್ಟಲಾಗದ್ದು ಈ ಮರ, ಈ ಪ್ರಕೃತಿ ಎಂದು ಮೊದಲ ಸಲ ಅವಳೊಳಗೊಂದು ಜ್ಞಾನೋದಯವಾಯ್ತು.

'ಅಮ್ಮ ಕತೆ?' ಎಂದಳು ಸಾನ್ವಿ. ಹಾಂ... ಹಾಂ... ಎಂದು ಎಲ್ಲೋ ಕಳೆದುಹೋಗಿದ್ದವಳು ಎಚ್ಚರಾಗಿ, 'ಸಾನ್ವಿ, ಅಜ್ಜ ಹೇಳಿದ ಕತೆಯನ್ನು ಇವತ್ತು ರಾತ್ರಿ ನಾನು ಮುಂದುವರಿಸ್ತೀನಿ. ಇನ್ನು ಪ್ರತೀ ರಾತ್ರಿಯೂ ಅಜ್ಜನಂತೆ ನಾನೂ ನಿಂಗೆ ಕತೆ ಹೇಳ್ತೀನಿ, ಆಗ್ಬೋದಾ' ಎಂದು ಸಾನ್ವಿಯ ಗಲ್ಲ ಸವರಿಸಿದಳು ಆಗ್ಬೋದು ಈ ಹುಡುಗಿಗೆ ಕತೆಯ ಹುಚ್ಚು ಹೇಗೆ ಹಿಡೀತು? ಎನ್ನುವ ಪ್ರಶ್ನೆಗೆ, ನಂಗೂ ಬಾಲ್ಯದಲ್ಲಿ ಕತೆಯಂದ್ರೆ ಅದೆಷ್ಟು ಇಷ್ಟ ಇತ್ತು ಎಂದು ನೆನೆದು ಪುಳಕಗೊಂಡಳು. ಆ ಕ್ಷಣದಲ್ಲಿ ತನ್ನೊಳಗೆ ಹೊಚ್ಚ ಹೊಸ ಜಗತ್ತೊಂದು ತೆರೆದುಕೊಂಡಂತನ್ನಿಸಿತು ಶಾಲಿನಿಗೆ. ಅಷ್ಟೊತ್ತಿಗೆ ಅಲ್ಲಿ ಕೂತಿದ್ದ ಅಜ್ಜನ ಮೊಮ್ಮಗನೂ 'ಅಜ್ಜ ಕತೆ ರಾತ್ರಿ ಹೇಳು' ಎಂದು ಬಗಲಲ್ಲಿದ್ದ ಬಾಲು ತಕೊಂಡು ಅಲ್ಲೇ ಕ್ಯಾಚ್ ಕ್ಯಾಚ್ ಆಟ ಆಡಲು ಶುರುಮಾಡಿದ. ಅವನನ್ನು ನೋಡುತ್ತ ನಿಂತ ಸಾನ್ವಿಗೆ ತಾನೇ ಚೆಂಡಿನಂತೆ ಪುಟಿದಂತಾಗಿ ಅವಳೂ ಕ್ಯಾಚ್ ಕ್ಯಾಚ್ ಎಂದು ಕೂಗುತ್ತ ಓಡಿದಳು. ಅರಳುಗಣ್ಣಿನ ಆ ಪುಟ್ಟ ಇವಳ್ಯಾರು ಒಮ್ಮೆಲೇ ಆಕಾಶದಿಂದ ಉದುರಿದಳಾ? ಮರದಲ್ಲಿರುವ ಹಕ್ಕಿಗಳ ಲೋಕದಿಂದ ಬಂದಳಾ ಎನ್ನುವ ವಿಚಿತ್ರ ಅಪರಿಚಿತ ಭಾವದಲ್ಲಿ ಸಾನ್ವಿಯನ್ನೊಮ್ಮೆ ನೋಡಿದರೂ. ಅವಳ ಲವಲವಿಕೆ, ಕೇಕೆ ಕಂಡು ಹುರುಪಾಗಿ ಅವಳನ್ನೂ ಆಟಕ್ಕೆ ಸ್ವಾಗತಿಸಿದ. ಅಪರಿಚಿತತೆಯೂ ಮುಗ್ಧತೆಯ ಹುಲ್ಲುಹಾಸಿನಲ್ಲಿ ಇಬ್ಬನಿಯಾಯ್ತು. ಮಕ್ಕಳು ಅದೆಷ್ಟು ಬೇಗ ಅಪರಿಚಿತತೆಯ ಕಳಚಿಕೊಂಡು ಪರಿಚಿತರಾಗಿಬಿಡುತ್ತಾರಲ್ಲವಾ? ಎಂದು ತನ್ನನ್ನೇ ಕೇಳಿಕೊಂಡು ಶಾಲಿನಿ, ಮಕ್ಕಳ ನಗು, ಉಲ್ಲಾಸ, ಕೇಕೆಗಳ ನಾಕದಲ್ಲಿ ಮುಳುಗಿದಳು.

ಚೆಂಡಾಟ, ಹುಲ್ಲಿನಾಟ, ಮರದಾಟ, ಕೊಂಬೆಯಾಟ, ಇರುವೆಯಾಟ ಹೀಗೆ ಇಬ್ಬರೂ ಏನೇನೋ ಹೊಸ ಹೊಸ ಆಟಗಳನ್ನು ಅನ್ವೇಷಿಸುತ್ತ ಕರಗಿದರು. ಇಬ್ಬರೂ ಪರಿಚಿತರಂತೆ ಆಟವಾಡೋದು ನೋಡಿ ಶಾಲಿನಿ ಬೆರಗಾದಳು. ಕೊನೆಗೆ ಇಬ್ಬರೂ ಆಟವಾಡಿ ಸುಸ್ತಾಗಿ ಹುಲ್ಲಿನ ಮಡಿಲಲ್ಲೇ ಕೂತರು.

'ಹೇ ನಿಂಗೆ ಸುಸ್ತಾಯ್ತಾ' ಎಂದು ಆ ಪುಟ್ಟನು, ಕಿಸೆಯಿಂದೇನೋ ತೆಗೆದು 'ತಗೋ ಕಿತ್ತಳೆ ಪೆಪ್ಪರಮೆಂಟು. ನಂಗಜ್ಜ ಕೊಟ್ಟಿದ್ದು, ಎರಡಿದೆ, ಒಂದು ನಿಂಗೆ, ಒಂದು ನಂಗೆ, ತಿನ್ನು ಸುಸ್ತೆಲ್ಲಾ ಹೋಗತ್ತೆ ಎಂದು ಸಾನ್ವಿಯ ಕೈಗಿಟ್ಟ. ಮೊದಲೇ ಸುತ್ತಲೂ ಮೂಡಿದ್ದ ಸಂಜೆಸೂರ್ಯನ ಕಿತ್ತಳೆಬಣ್ಣದ ಬೆಳಕಿನಲ್ಲಿ ಹೊಳೆಯುತ್ತಿದ್ದ ಸಾನ್ವಿಗೆ, ಆ ಪುಟ್ಟನ ಕೈಯಿಂದ ಕಿತ್ತಳೆ ಸೂರ್ಯನೇ ತನ್ನ ಬೊಗಸೆಗೆ ಬಂದಷ್ಟು ಖುಷಿಯಾಗಿ, ತನ್ನೊಳಗಿನ ಖುಷಿಯ ಒರತೆ ಚಿಮ್ಮಿಸಿ ಥ್ಯಾಂಕ್ಸ್ ಎಂದಳು. ಆ ಥ್ಯಾಂಕ್ಸ್‌ನ ಮುಗ್ಧ ಸಿಹಿಗೆ ಪುಟ್ಟನೂ ಥಳ ಥಳ ಮಿನುಗಿದ. ಈವರೆಗೆ ಯಾವುದಕ್ಕೂ ಸಂಭ್ರಮಿಸದ, ಸಾವಿರ ಸಾವಿರ ಆಟಿಕೆ ತಂದುಕೊಟ್ಟರೂ, ದೊಡ್ಡ ದೊಡ್ಡ ಕಂಪನಿಯ ಚಾಕ್ಲೇಟ್, ಕುಕೀಸ್ ತಂದುಕೊಟ್ಟರೂ ಥ್ಯಾಂಕ್ಸ್ ಹೇಳದ ಸಾನ್ವಿಯೊಳಗಿಂದ ಈಗ ಜಲಪಾತದಷ್ಟೇ ಸಹಜವಾಗಿ ಧುಮುಕಿದ ಥ್ಯಾಂಕ್ಸ್ ಎನ್ನುವ ಒಂದೇ ಒಂದು ಪದ, ಜಗತ್ತಿನ ಸಕಲ ಐಷಾರಾಮಿ ಸಂಗತಿಗಳಿಗಿಂತಲೂ ದೊಡ್ಡದು ಅನ್ನಿಸಿ, ತನ್ನೆದುರು ಕೂತು ಕಿತ್ತಳೆ ಪೆಪ್ಪರಮೆಂಟನ್ನು ಬಾಯಿಗೆ ಹಾಕುತ್ತಿದ್ದ ಸಾನ್ವಿಯನ್ನೇ ಮತ್ತೆ ಮತ್ತೆ ಬೆರಗಾಗಿ ಕಣ್ತುಂಬಿಕೊಂಡಳು ಶಾಲಿನಿ. ಬರೀ ಮಗಳಲ್ಲ ಇವಳು, ತನ್ನ ಜಗದ ಮುಗುಳು ಎಂದೆನ್ನಿಸಿ ಮೊಟ್ಟ ಮೊದಲ ಬಾರಿಗೆ ಹೊಸ ಅಮ್ಮನಾದಂತಾಗಿ ರಮ್ಯ ಪುಳಕ ಅನುಭವಿಸಿದಳು. ಬೆಳಕಿನಂತೆ ಹೊಳೆಯುತ್ತಿದ್ದ ಆ ಎಳೆಯ ಜೀವಗಳ ಬಾಯಲ್ಲಿ, ತುಟಿಯ ತುದಿಯಲ್ಲಿ, ಸೂರ್ಯನಷ್ಟೇ ಕೆಂಪೇರಿ ನಲಿಯುತ್ತಿದ್ದ ಪೆಪ್ಪರಮಿಂಟಿನ ಕೆಂಪು, ಅದರ ಸಿಹಿ, ಅವರನ್ನೇ ನೋಡಿ ಕೂತಿದ್ದ ಅಜ್ಜನಿಗೆ, ತನ್ನ ಬಾಳ ಸಂಜೆಗೊಂದು ಹೊಸ ಹೊಳಪು ಕೊಟ್ಟಂತನ್ನಿಸಿತು. ತನ್ನ ತುಟಿಗೂ ಆ ಪೆಪ್ಪರಮೆಂಟಿನ ಬಣ್ಣ ಹರಡಿದಷ್ಟು ಧನ್ಯತೆ ಆವರಿಸಿತು. ಇಬ್ಬರೂ ತನ್ನಂತೆಯೇ ಇರುವ ಕಿತ್ತಳೆ ಪೆಪ್ಪರಮೆಂಟು ತಿಂದದ್ದನ್ನು ನೋಡಿ, ದಿಗಂತದಂಚಿನಲ್ಲಿದ್ದ ಸೂರ್ಯ ಇನ್ನಷ್ಟು ಕೆಂಪಗಾದ.

**ಪ್ರತಿಕ್ರಿಯಿಸಿ: feedback@sudha.co.in**